ಉಳಿಸುತ್ತಿರಲಿಲ್ಲವಂತೆ. ಅಂಥವರ ಎದೆ ಸೀಳಿ ಹಸಿ ರಕ್ತವನ್ನು ಗೊಟ್ಟದಲ್ಲಿ ಕುಡಿಯುತ್ತಿದ್ದನಂತೆ. ಅವರು ಪಚ್ಚಿನೆತ್ತರು ರಾಮರೆಡ್ಡಿ ಎಂದೇ ಖ್ಯಾತಿ ಪಡೆದಿದ್ದರಂತೆ. ಫ್ಯಾಕ್ಷನಿಸ್ಟ್ ಕಥೆ ಇಟ್ಟುಕೊಂಡು ಒಂದು ಸಿನಿಮಾ ಮಾಡೋಣ ಅಂತ ತೀರ್ಮಾನ ಮಾಡಿದ್ದೀನಿ. ನಮ್ಮ ಮಹಮ್ಮದ್ ಪೈಲ್ವಾನ್ ಅದರಲ್ಲಿ ಅವರದೇ ಒರಿಜಿನಲ್ ಪಾತ್ರ ಮಾಡುತ್ತಿದ್ದಾರೆ. ನಮ್ಮ ಅಣ್ಣ ವೀರಾಂಜನೇಯರೆಡ್ಡಿ ಕೂಡಾ ಒಪ್ಪಿದ್ದಾರೆ. ಪೈಲ್ವಾನ್ ಕೂಡಾ ಒಂದಿಷ್ಟು ದುಡ್ಡು ಹಾಕುತ್ತಿದ್ದಾರೆ. ಇವರನ್ನು ಸುಮ್ಮನೆ ತಿಳಿಯಬೇಡಿ. ಹೈದರಾಬಾದ್ ಬಿರಿಯಾನಿನ ಬೇರೆ ಬೇರೆ ರಾಜ್ಯಗಳಿಗೆ, ಗಲ್ಫ್ ರಾಷ್ಟ್ರಗಳಿಗೆ ಪ್ರತಿನಿತ್ಯ ವಿಮಾನಗಳ ಮೂಲಕ ಕಳಿಸಿಕೊಡ್ತಾರೆ. ಸುಮಾರು ನೂರು ಜನ ಕೆಲ್ಸ ಮಾಡ್ತಾರೆ . ಈ ಬಿರಿಯಾನಿ ಕೂಡ ಅವರದ್ದೆ. ಬಾಯಿಗಿಟ್ಟರೆ ಬೆಣ್ಣೆಯಂತೆ ಕರಗಿಹೋಗುತ್ತದೆ. ವೈನ್ ಮುಗಿಸಿ ಊಟ ಮಾಡೋಣ. ಇಷ್ಟೆಲ್ಲಾ ಇದ್ರೂ ನಮ್ಮ ಪೈಲ್ವಾನ್ ಅದೇ ಹಳೆ ಮನೆಯಲ್ಲೇ ಬದುಕು ಸವೆಸ್ತಾ ಇದಾರೆ..." ನರಸಿಂಹರೆಡ್ಡಿ ದೀರ್ಘವಾಗಿ ಮಾತನಾಡುತ್ತಿದ್ದರೂ ಒಂದಿಷ್ಟೂ ಬೇಸರವೆನಿಸುತ್ತಿರಲಿಲ್ಲ. ಬದಲಾಗಿ ಆತನ ಒಂದೊಂದು ಮಾತು ಕೂಡ ಕುತೂಹಲದ ಚಿಲುಮೆಯಿಂದ ಚಿಮ್ಮಿ ಬರುತ್ತಿರುವಂತೆ ಅನ್ನಿಸುತ್ತಿತ್ತು.

ನರಸಿಂಹರೆಡ್ಡಿ ಹೇಳಿದಂತೆ ಬಿರಿಯಾನಿ ತುಂಬಾ ರುಚಿಯಾಗಿತ್ತು. ನರಸಿಂಹರೆಡ್ಡಿಯ ಬ್ಯಾಗಿನಲ್ಲಿದ್ದ ಎರಡು ಬೆಳ್ಳಿ ತಟ್ಟೆಗಳನ್ನು ತೆಗೆದು ಸ್ವತಃ ಮಹಮ್ಮದ್ ಪೈಲ್ವಾನರೇ ಬಿರಿಯಾನಿ ಬಡಿಸಿದ್ದರು. ಊಟ ಬಡಿಸುತ್ತಾ ಮಹಮ್ಮದ್ ಪೈಲ್ವಾನ್ ನನ್ನ ಕಡೆ ನೋಡುತ್ತಾ, "ಸಾರ್ ಇವೊತ್ತು ನಾನು ಏನೇ ಪೊಸಿಷನ್ನಿನಲ್ಲಿದ್ದರೂ ಅದಕ್ಕೆ ಇವರ ಕುಟುಂಬಾನೆ ಕಾರಣ. ಅವೊತ್ತು ಇವರು ತಮ್ಮ ಮನೆಯಲ್ಲಿ ಇಟ್ಟುಕೊಂಡು ರಕ್ಷಣೆ ಕೊಡದೇ ಇದ್ದಿದ್ದರೆ ನಾನಿವತ್ತು ಉಸಿರಾಡಿಕೊಂಡು ಇರುತ್ತಿರಲಿಲ್ಲ. ಆ ಎಸ್ಪಿ ವೆಂಗಲರಾವ್ ನನ್ನ ಎನ್‌ಕೌಂಟರ್ ಮಾಡಬೇಕೆಂದು ತೀರ್ಮಾನ ಮಾಡಿಬಿಟ್ಟಿದ್ದರು. ಆದರೆ ಮಹಾನುಭಾವ ತಾವೇ ಆಕ್ಸಿಡೆಂಟ್‌ನಲ್ಲಿ ಹೋಗಿಬಿಟ್ಟರು. ಭಯ್ಯಾರ ಅಣ್ಣ ವೀರಾಂಜನೇಯರೆಡ್ಡಿ ಎಸ್ಪಿ ಕುಟುಂಬಕ್ಕೆ ಅವೊತ್ತಿನ ದಿನವೇ ನಲವತ್ತು ಲಕ್ಷ ಕೊಟ್ಟಿದ್ದರು. ಆ ಕುಟುಂಬ ಇವೊತ್ತು ಅಮೆರಿಕದಲ್ಲಿ ಹಾಯಾಗಿ ಜೀವನ ಮಾಡ್ತಿದೆ. ಅವೊತ್ತಿನಿಂದ ಯಾವ ಪೊಲೀಸ್ ಆಫೀಸರ್ರೂ ನನ್ನ ಬಂಧಿಸೋಕೆ ಮುಂದೆ ಬರ್ಲಿಲ್ಲ..." ಪೈಲ್ವಾನ್ ನಗುತ್ತಾ ಹೇಳಿದ್ದರು. ಆತನ ಮಾತುಗಳಲ್ಲಿ ಎಂಥದೋ ತಣ್ಣಗಿನ ಕ್ರೌರ್ಯ, ಯಾವುದೋ ಭಯಾನಕ ರಹಸ್ಯ ಮಡುಗಟ್ಟಿರುವಂತೆ ಅನ್ನಿಸಿತ್ತು ನನಗೆ.

"ಸಾರ್ ಎಲ್ಲಿಯವರು..." ಎಂದು ನನ್ನನ್ನು ಉದ್ದೇಶಿಸಿ ಪೈಲ್ವಾನರು ನರಸಿಂಹರೆಡ್ಡಿಯವರನ್ನು ಕೇಳಿದ್ದರು.

"ಓಹ್ ಮರೆತಿದ್ದೆ ಪೈಲ್ವಾನ್. ಇವರು ರಾಯಲಪಾಡು ರಾಘವಶರ್ಮ ಅಂತ. ನಮ್ಮ ವೇಮುಲಶಾಸ್ತ್ರಿಯ ಸ್ನೇಹಿತರು. ಬೆಂಗಳೂರಿನಿಂದ ಬಂದಿದ್ದಾರೆ. ತುಂಬಾ ತಿಳಿದುಕೊಂಡವರು. ಮನಃಶಾಸ್ತ್ರದ ಮೇಲೆ ಡಾಕ್ಟರೇಟ್ ಮಾಡಿರುವರಂತೆ. ಮುಖ ನೋಡಿದರೆ ಮನಸ್ಸಿನಲ್ಲಿರುವುದನ್ನು ಹೇಳಿಬಿಡುತ್ತಾರಂತೆ. ಅದೆಲ್ಲ ಮುಖ್ಯವಲ್ಲ, ಇವರು ನಮ್ಮ ಚಂಚಲಗೂಡ ಜೈಲಿನ ಐಜಿಪಿ ಕೃಷ್ಣ ಮನೋಹರ್ ಇದಾರಲ್ಲ ಅವರ ಕ್ಲಾಸ್‌ಮೇಟ್ ಮತ್ತು ಕ್ಲೋಸ್ ಫ್ರೆಂಡ್ ಅಂತೆ. ಅದೇ ನಮ್ಮ ಹುಡ್ಗ ಪ್ರತಾಪಸಿಂಹರೆಡ್ಡಿನ ಮುಂಬಯಿಯಿಂದ ಅರೆಸ್ಟ್ ಮಾಡಿ ರಾಜಮಂಡ್ರಿ ಜೈಲಿನಲ್ಲಿ ಇಟ್ಟಿದ್ದಾರೆ. ಅವನಿಗೆ ಜೈಲಿನಲ್ಲಿ ತುಂಬಾ ಟಾರ್ಚರ್ ಕೊಡ್ತಾ ಇದಾರಂತೆ. ಕೃಷ್ಣ ಮನೋಹರ್‌ರಿಂದ ಜೈಲು ಸೂಪರಿಟೆಂಡೆಂಟ್‌ಗೆ ಹೇಳಿಸೋಣ ಅಂತ..." ಎಂದು ಆಕಳಿಸತೊಡಗಿದರು. ಆತನ ಕಣ್ಣಲ್ಲಿ ನಿದ್ದೆ ಮಡುಗಟ್ಟಿದಂತೆ ಕಾಣುತ್ತಿತ್ತು. ಮಹಮ್ಮದ್ ಪೈಲ್ವಾನ್ ಹೊರಟು ನಿಂತರು. ಇನ್ನು ವೇಮುಲಶಾಸ್ತ್ರಿ ಬರುವವರೆಗೂ ನರಸಿಂಹರೆಡ್ಡಿಯಿಂದ ಬಿಡುವು ಪಡೆದು ನನ್ನ ರೂಮಿನಲ್ಲಿ ರೆಸ್ಟ್